**ದಿನಾಂಕ 25.10.2024 ರಂದು ಸಾಕ್ಷಿಗೆ ಪ್ರಮಾಣ ವಚನವನ್ನು ಬೋಧಿಸಲಾಯಿತು.**

**ಪಾಟೀಸವಾಲುಃ ಶ್ರೀ ಕೆ.ಯು. ವಕೀಲರಿಂದಃ**

1. ನನ್ನ ತಾಯಿ ಅವಿದ್ಯಾವಂತೆಯಾಗಿರುವ ಕಾರಣ ಹೆಬ್ಬೆಟ್ಟಿನ ರುಜು ಬಿಟ್ಟರೆ ಬೇರೆ ಯಾವುದೇ ಸಹಿ ಮಾಡುತ್ತಿರಲಿಲ್ಲ ಎಂದರೆ ಸರಿ. ದಾವೆಯನ್ನು ಹಾಕುವ ಕಾಲಕ್ಕೆ ವಾದ ಪತ್ರದಲ್ಲಿ ನಾನೇ ಸಹಿ ಮಾಡಿದ್ದೇನೆ. ದಾವೆ ಹಾಕುವ ಕಾಲಕ್ಕೆ ಹೇಳಿಕೆಯಲ್ಲಿ ನನ್ನ ತಾಯಿ ಸಹ ಹೆಬ್ಬೆಟ್ಟಿನ ರುಜುವನ್ನು ಹಾಕಿದ್ದಾರೆ. ಹೇಳಿಕೆಗೆ ಮಾಹಿತಿಯನ್ನು ನನ್ನ ತಾಯಿ ಕೊಟ್ಟಿರುತ್ತಾರೆ. 02.03.2015 ರಂದು ನಾವು ಸಲ್ಲಿಸಿರುವಂತಹ ವಾದ ಪತ್ರಕ್ಕೆ ಮಾಹಿತಿಯನ್ನು ನಾನೇ ವಕೀಲರಿಗೆ ಕೊಟ್ಟಿದ್ದೇನಾ ಇಲ್ಲವಾ ನನಗೆ ಗೊತ್ತಿಲ್ಲ, ಸಾಕ್ಷಿ ಮುಂದುವರೆದು ನನ್ನ ತಾಯಿಯ ಹೆಬ್ಬೆಟ್ಟಿನ ರುಜು ಇದೆ ಎಂದು ನುಡಿಯುತ್ತಾರೆ.
2. ಸದರಿ ವಾದ ಪತ್ರಕ್ಕೆ ನಾನು ಮತ್ತು ನನ್ನ ತಾಯಿ ಒಂದೇ ದಿನ ರುಜು ಮತ್ತು ಹೆಬ್ಬೆಟ್ಟಿನ ರುಜುವನ್ನು ಹಾಕಿರುತ್ತೇವೆ. ನನ್ನ ತಾಯಿ ಅವಿದ್ಯಾವಂತೆಯಾದ ಕಾರಣ ದಾಖಲಾತಿಗಳ ಬಗ್ಗೆ ಅಷ್ಟು ತಿಳುವಳಿಕೆ ಇಲ್ಲ ಎಂದರೆ ಸರಿ. ದಾವೆ ಹಾಕುವ ಕಾಲಕ್ಕೆ ನನ್ನ ತಾಯಿಗೆ ದಾಖಲಾತಿಗಳ ಬಗ್ಗೆ ತಿಳುವಳಿಕೆ ಇಲ್ಲದೇ ಇರುವ ಕಾರಣ ನಾನೇ ದಾಖಲಾತಿಗಳನ್ನು ಪಡೆದುಕೊಂಡಿದ್ದೇನೆ ಎಂದರೆ ಸಾಕ್ಷಿಯು ನಗರಸಭೆಯಲ್ಲಿ ವಕೀಲರು ಪಡೆದುಕೊಂಡಿರುತ್ತಾರೆ ಎಂದು ನುಡಿಯುತ್ತಾರೆ. ಯಾವ ವಕೀಲರು ದಾಖಲಾತಿಗಳನ್ನು ಪಡೆದುಕೊಂಡಿರುತ್ತಾರೆ ಎಂದರೆ ಸಾಕ್ಷಿಯು ರಾಮಕೃಷ್ಣ ಎನ್ನುವ ವಕೀಲರು ತೆಗೆದುಕೊಂಡಿರುತ್ತಾರೆ ಎಂದು ನುಡಿಯುತ್ತಾರೆ. ನಗರಸಭೆಯ ದಾಖಲಾತಿಗಳನ್ನು ಹೊರತುಪಡಿಸಿ ಉಳಿದ ದಾಖಲಾತಿಗಳನ್ನು ಜವನಯ್ಯ ವಕೀಲರು ಪಡೆದುಕೊಂಡಿರುತ್ತಾರೆ.
3. ನಿ.ಪಿ.3 ರ ವಂಶವೃಕ್ಷಕ್ಕೆ ಮಾಹಿತಿಯನ್ನು ಯಾರು ಕೊಟ್ಟಿದ್ದಾರೆ ಎಂದರೆ ಸಾಕ್ಷಿಯು ನಮ್ಮ ಸೋದರ ಮಾವನ ಮಗನಾದ ಹನುಮಂತಪ್ಪನವರು ವಂಶವೃಕ್ಷ ಪ್ರಮಾಣ ಪತ್ರವನ್ನು ತಯಾರು ಮಾಡಿರುತ್ತಾರೆ ಎಂದು ನುಡಿಯುತ್ತಾರೆ. ಈ ಕೇಸಿಗಾಗಿ ಸುಳ್ಳು ನಿ.ಪಿ.3 ರ ವಂಶವೃಕ್ಷವನ್ನು ನಾನು ಸೃಷ್ಟಿ ಮಾಡಿಸಿದ್ದೇನೆ ಎಂದರೆ ಸರಿಯಲ್ಲ. ನನ್ನ ತಾಯಿ ಮತ್ತು ನಾನು ಸುಳ್ಳು ಹೇಳಿಕೆಯನ್ನು ಕೊಟ್ಟು ನಿ.ಪಿ.3 ರ ವಂಶವೃಕ್ಷವನ್ನು ಸೃಷ್ಟಿ ಮಾಡಿಸಿದ್ದೇವೆ

ಎಂದರೆ ಸರಿಯಲ್ಲ. ನಿ.ಪಿ.4 ರಲ್ಲಿ ಇರುವ ಆರ್.ವಿ. ಪ್ರಸನ್ನಕುಮಾರ್ ರವರ ತಂದೆಯ ಹೆಸರು ವೆಂಕರಾಮಯ್ಯಶೆಟ್ಟಿ, ತಾಯಿ ಹೆಸರು ವೆಂಕಟಲಕ್ಷ್ಮಮ್ಮ ಮತ್ತು ಹೆಂಡತಿಯ ಹೆಸರು ಕೃಷ್ಣವೇಣಮ್ಮ ಎಂದು ಇದೆ ಎಂದರೆ ಸಾಕ್ಷಿಯು ಅವರು ಬರೆಸಿಕೊಂಡಿರುತ್ತಾರೆ, ನಾವು ಕೊಟ್ಟಿಲ್ಲ ಎಂದು ನುಡಿಯುತ್ತಾರೆ. ನಿ,ಪಿ.5 ರ ದಾಖಲಾತಿಯಲ್ಲಿ 30.11.2016 ರಲ್ಲಿ ನಾನು ನನ್ನ ಹೇಳಿಕೆಯ ಮೇರೆಗೆ ಸೃಷ್ಟಿ ಮಾಡಿದ ದಾಖಲಾತಿ ಎಂದರೆ ಸರಿಯಲ್ಲ.

4. ನಿ.ಪಿ. 6 ರ ದಾಖಲಾತಿ ನಾನೇ ಕೇಸಿಗಾಗಿ ಸೃಷ್ಟಿ ಮಾಡಿದ ದಾಖಲಾತಿ ಎಂದರೆ ಸರಿಯಲ್ಲ. ನಿ.ಪಿ. 6 ರ ದಾಖಲಾತಿ ಜೆರಾಕ್ಸ್ ಪ್ರತಿ ಎಂದರೆ ಸಾಕ್ಷಿಯು ನನಗೆ ಮೂಲ ಪ್ರತಿ ಬೇಕಿದ್ದ ಕಾರಣ ಜೆರಾಕ್ಸ್ ಪ್ರತಿಯನ್ನು ಕೊಟ್ಟಿರುತ್ತೇನೆ ಎಂದು ನುಡಿಯುತ್ತಾರೆ. 06.02.2013 ರಲ್ಲಿ ನಿ.ಪಿ. 7 ರ ದಾಖಲಾತಿಯನ್ನು ಸೃಷ್ಟಿ ಮಾಡಿಕೊಂಡಿದ್ದೇವೆ ಎಂದರೆ ಸರಿಯಲ್ಲ. 02.01.2008 ರಲ್ಲಿ ನಿ.ಪಿ.8 ರ ದಾಖಲಾತಿಯನ್ನು ಓಟರ್ ಮತ್ತು ಆಧಾರ್ ಕಾರ್ಡ್ ಗಳನ್ನು ಸೃಷ್ಟಿ ಮಾಡಿಕೊಂಡು ಬ್ಯಾಂಕ್ ಅಧಿಕಾರಿಗಳಿಗೆ ಹಾಜರುಪಡಿಸಿ ಸುಳ್ಳು ಪಾಸ್ ಪುಸ್ತಕವನ್ನು ಪಡೆದುಕೊಂಡಿದ್ದೇವೆ ಎಂದರೆ ಸರಿಯಲ್ಲ. ನಿ.ಪಿ. 9 ರ ದಾಖಲಾತಿಯನ್ನು ಸುಳ್ಳು ಸೃಷ್ಟಿ ಮಾಡಿಸಿದ್ದೇವೆ ಎಂದರೆ ಸರಿಯಲ್ಲ.

5. ನಿ.ಪಿ.10 ರ ದಾಖಲಾತಿಯಲ್ಲಿ ಖಾತೆ ನಂ. 570/274 ಯಾರ ಹೆಸರಿಲ್ಲಿ ಖಾತೆ ಇದೆ ಮತ್ತು ಯಾರಿಗೆ ಸಂಬಂಧಪಟ್ಟಿದೆ ಎಂದು ತೋರಿಸುವುದಕ್ಕೆ ದಾಖಲಾತಿ ನ್ಯಾಯಾಲಯಕ್ಕೆ ಹಾಜರುಪಡಿಸಿಲ್ಲ, ಅದನ್ನು ಮಾರಾಟ ಮಾಡಲಾಗಿದೆ ಎಂದು ಸಾಕ್ಷಿ ಮುಂದುವರೆದು ನುಡಿಯುತ್ತಾರೆ. ಯಾವ ಸ್ವತ್ತಿಗೆ ಸದರಿ ಖಾತೆ ಸಂಬಂಧಪಟ್ಟಿದೆ ಎಂದರೆ ನನಗೆ ಗೊತ್ತಿಲ್ಲ. ಸದರಿ ಖಾತೆಗೆ ಕಂದಾಯ ಕಟ್ಟಿದ್ದು, ಅದಕ್ಕೆ ರಸೀದಿಯನ್ನು ಕೊಟ್ಟವರು ಯಾರು ಎಂದರೆ ನನಗೆ ಗೊತ್ತಿಲ್ಲ ಎಂದು ಸಾಕ್ಷಿ ನುಡಿಯುತ್ತಾರೆ. ನಿ,ಪಿ. 11 ರ ದಾಖಲಾತಿಯನ್ನು ಉದ್ದೇಶಪೂರ್ವಕವಾಗಿ ಹನುಮಕ್ಕ ಕೋಂ ತಿಮ್ಮಾಭೋವಿ ಬದಲಿಗೆ ಹನುಮಕ್ಕ ಕೋಂ ಪ್ರಸನ್ನಕುಮಾರ್ ಎಂದು ಸೃಷ್ಟಿ ಮಾಡಿಸಿದ್ದೇವೆ ಎಂದರೆ ಸರಿಯಲ್ಲ. ನಿ.ಪಿ.12 ರ ದಾಖಲಾತಿಯಲ್ಲಿ ನಾನೇ ಹನುಮಕ್ಕ ಕೋಂ ಪ್ರಸನ್ನಕುಮಾರ್ ಎಂದು ಬರೆದುಕೊಂಡು ಕೇಸಿಗಾಗಿ ಸುಳ್ಳು ಸೃಷ್ಟಿ ಮಾಡಿಕೊಂಡಿದ್ದೇನೆ ಎಂದರೆ ಸರಿಯಲ್ಲ.

6. ನಿ.ಪಿ.13 ರ ದಾಖಲಾತಿಯನ್ನು ಹನುಮಕ್ಕ ಕೋಂ ತಿಮ್ಮಾಭೋವಿ ಬದಲಾಗಿ ಹನುಮಕ್ಕ ಕೋಂ ಪ್ರಸನ್ನಕುಮಾರ್ ತಿದ್ದುಪಡಿ ಮಾಡಿ ಬರೆಸಿದ್ದು, ಅದಕ್ಕೆ ಯಾವೆಲ್ಲಾ ದಾಖಲಾತಿಗಳನ್ನು ಹಾಜರುಪಡಿಸಿ ತಿದ್ದುಪಡಿ ಮಾಡಿಸಿದ್ದೀರಾ ಎಂದರೆ ಸಾಕ್ಷಿಯು ಯಾವ ದಾಖಲಾತಿ ಕೊಟ್ಟಿದ್ದಾರೋ ಗೊತ್ತಿಲ್ಲ, ಆದರೆ ತಿದ್ದುಪಡಿ ಮಾಡಲಾಗಿದೆ ಎಂದು ನುಡಿಯುತ್ತಾರೆ. ನಿ.ಪಿ.14 ಮತ್ತು 15 ರಲ್ಲಿ ಟಿ.ಹನುಮಂತಪ್ಪ ಬಿನ್ ತಿಮ್ಮಾಭೋವಿ ಎನ್ನುವುದನ್ನು ಪ್ರಸನ್ನಕುಮಾರ್ ಎಂದು ಸೃಷ್ಟಿ ಮಾಡಿಸಿದ್ದೇವೆ ಎಂದರೆ ಸರಿಯಲ್ಲ. ನಾನು ಹಾಜರುಪಡಿಸಿರುವ ಎಲ್ಲಾ ದಾಖಲಾತಿಗಳನ್ನು ಉದ್ದೇಶಪೂರ್ವಕವಾಗಿ ಪ್ರತಿವಾದಿಗಳಿಗೆ ಸೇರಿದ ಜಮೀನನ್ನು ಕಬಳಿಸುವ ಉದ್ದೇಶದಿಂದ ನನ್ನ ತಂದೆಯ ಹೆಸರನ್ನು ಬದಲಾಗಿಯಿ ಸುಳ್ಳು ಸೃಷ್ಟಿ ಮಾಡಿದ್ದೇನೆ ಎಂದರೆ ಸರಿಯಲ್ಲ.

7. ಈ ದಾವೆಯ ಪ್ರತಿವಾದಿ 1 ರಿಂದ 3 ಮತ್ತು ಅವರ ತಂದೆ ದಿನಾಂಕ 02.08.2007 ರಲ್ಲಿ ಸರ್ವೆ ನಂ. 216/3 ರಲ್ಲಿ 1 ಎಕರೆ 28 ಗುಂಟೆ ಜಮೀನನ್ನು ಅಬ್ದುಲ್ ವಹೀದ್ ಸಾಬ್ ಎನ್ನುವವರಿಗೆ ಮಾರಾಟ ಮಾಡಿರುವ ಕ್ರಯ ಪತ್ರವನ್ನು ತೋರಿಸಿದ್ದು, ಅದನ್ನು ಒಪ್ಪಿಕೊಂಡಿರುತ್ತಾರೆ, ಸಾಕ್ಷಿ ಗುರುತಿಸಿದ ಕಾರಣ ಸದರಿ ದಾಖಲಾತಿಯನ್ನು **ನಿ.ಡಿ. 4** ಎಂದು ಗುರುತಿಸಲಾಯಿತು. ನನ್ನ ಪ್ರಮಾಣ ಪತ್ರದಲ್ಲಿ ಹೇಳಿರುವಂತೆ ಹನುಮಕ್ಕ ಎನ್ನುವವರು ಪ್ರಸನ್ನಕುಮಾರ್ ರವರ ಮೊದಲನೇ ಹೆಂಡತಿ ಎಂದು ಹೇಳಿದ್ದು, 2000 ನೇ ಸಾಲಿನ ಹಿಂದೆ ಅದಕ್ಕೆ ದಾಖಲಾತಿ ಇದೆಯಾ ಎಂದರೆ ಸಾಕ್ಷಿಯು ಆಗ ಯಾವುದೇ ದಾಖಲಾತಿಗಳು ಇಲ್ಲ, ಅವರು ಪ್ರೀತಿಸಿ ಮದುವೆಯಾಗಿದ್ದರು ಎಂದು ನುಡಿಯುತ್ತಾರೆ.

8. 2000 ನೇ ಸಾಲಿನ ಮೊದಲು ನಾನು ಪ್ರಸನ್ನಕುಮಾರ್ ರವರ ಮಗ ಆಗಿದ್ದೆನು ಎಂದು ತೋರಿಸಲು ಯಾವುದಾದರೂ ದಾಖಲಾತಿ ಇದೆಯಾ ಎಂದರೆ ಯಾವುದೇ ದಾಖಲಾತಿ ಇಲ್ಲ. ಪ್ರಸನ್ನಕುಮಾರ್ ಜೊತೆಗೆ ನಾನು ಮತ್ತು ನನ್ನ ತಾಯಿ ಅವರ ಜೊತೆ ವಾಸ ಮಾಡಿರುವ ಬಗ್ಗೆ ಯಾವುದಾದರೂ ದಾಖಲಾತಿ ಇದೆಯಾ ಎಂದರೆ ಇಲ್ಲ ಎಂದು ನುಡಿಯುತ್ತಾರೆ. ಪ್ರಸನ್ನಕುಮಾರ್ ನನ್ನ ತಂದೆ ಅಲ್ಲ ಮತ್ತು ನನ್ನ ತಾಯಿಯ ಗಂಡನೂ ಅಲ್ಲ ಎಂದರೆ ಸರಿಯಲ್ಲ. ನಾನು ಮತ್ತು ಸತ್ಯಲಕ್ಷ್ಮಿಯವರ ಮಕ್ಕಳು ಹಾಗೂ ಸಾಕ್ಷಿ ಹೇಳಿರುವ ರಾಮು ರವರು ಮೊದಲಿನಿಂದಲೂ ಚೆನ್ನಾಗಿ ಇದ್ದೇವೆ ಎಂದರೆ ಸಾಕ್ಷಿಯು ಅವರು ನಮ್ಮ ಸಂಬಂಧಿಕರು

ಆದ ಕಾರಣ ಅವರ ಜೊತೆ ವಿಶ್ವಾಸ ಚೆನ್ನಾಗಿದೆ, ಸತ್ಯಲಕ್ಷ್ಮಿ ನನ್ನ ತಂದೆಯ ತಂಗಿ. ಸತ್ಯಲಕ್ಷ್ಮಿ ನಮ್ಮ ಸಂಬಂಧಿಕರು ಎಂದು ತೋರಿಸಲು 2000 ನೇ ಸಾಲಿನ ಹಿಂದೆ ಯಾವುದಾದರೂ ದಾಖಲಾತಿ ಇದೆಯಾ ಎಂದರೆ ಸಾಕ್ಷಿಯು ದಾಖಲಾತಿ ಇಲ್ಲ ಎಂದು ನುಡಿಯುತ್ತಾರೆ. ವಾದ ಮತ್ತು ಪ್ರಮಾಣ ಪತ್ರದಲ್ಲಿ ಹೇಳಿದಂತೆ ನಾನು ಜಂಟಿ ಕುಟುಂಬದಲ್ಲಿ ಇರಲಿಲ್ಲ ಎಂದರೆ ಸರಿಯಲ್ಲ

9. ಪ್ರತಿವಾದಿಗಳು ಮತ್ತು ಅವರ ತಂದೆ ಪ್ರಸನ್ನಕುಮಾರ್ ಮತ್ತು ತಾಯಿ ಕೃಷ್ಣವೇಣಮ್ಮ ರವರು ಒಂದೇ ಕುಟುಂಬದಲ್ಲಿ ಇದ್ದರು ಎಂದರೆ ಸಾಕ್ಷಿಯು ಅವರುಗಳು ಶಿರಾದಲ್ಲಿ ಇದ್ದರು ನಾವು ಬಂದು ಹೋಗಿ ಮಾಡುತ್ತಿದ್ದೆವು ಎಂದು ನುಡಿಯುತ್ತಾರೆ. ನನಗೂ ಅವರಿಗೂ ಯಾವುದೇ ಸಂಬಂಧವಿಲ್ಲ, ನಾವು ಬಂದು ಹೋಗಿ ಮಾಡುತ್ತಿರಲಿಲ್ಲ ಎಂದರೆ ಸರಿಯಲ್ಲ. ದಾವಾ ಐಟಂ ನಂ.1 ರಿಂದ 4 ರ ಆಸ್ತಿಗಳು ಪ್ರಸನ್ನಕುಮಾರ್ ರವರಿಗೆ ಸೇರಿದ ಸ್ವತ್ತುಗಳು ಎಂದರೆ ಸರಿ. 1 ರಿಂದ 3 ನೇ ಪ್ರತಿವಾದಿಗಳು ಪ್ರತ್ಯೇಕವಾಗಿ ವ್ಯಾಪಾರ ಮಾಡುತ್ತಿದ್ದಾರೆ ಎಂದರೆ ಸರಿಯಲ್ಲ, ನನ್ನ ತಂದೆ ತೀರಿಕೊಂಡ ನಂತರ ಅವರೆಲ್ಲರೂ ಬೇರೆಯಾಗಿದ್ದಾರೆ ಎಂದು ನುಡಿಯುತ್ತಾರೆ. ಯಾವುದೇ ಪ್ರಶ್ನೆ ಕೇಳಿದಾಗಲೂ ಪ್ರಸನ್ನಕುಮಾರ್ ನನ್ನ ತಂದೆ ಎಂದು ಉದ್ದೇಶಪೂರ್ವಕವಾಗಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

10. ಮಾರುತಿ ಟ್ರೇಡರ್ಸ್, ವಾಯುಪುತ್ರ ಜನರಲ್ ಸ್ಟೋರ್ ಮತ್ತು ಪವನ್ ಡಿಸ್ಟ್ರಿಬ್ಯೂಟರ್ಸ್ ನ್ನು ನೋಡಿದ್ದೇನೆ, ಮಾರುತಿ ಟ್ರೇಡರ್ಸ್ ನ್ನು 1 ನೇ ಪ್ರತಿವಾದಿ ನೋಡಿಕೊಳ್ಳುತ್ತಿದ್ದಾರೆ ಎಂದರೆ ಸಾಕ್ಷಿಯು ಮೊದಲು ನನ್ನ ತಂದೆ ನೋಡಿಕೊಳ್ಳುತ್ತಿದ್ದರು ಎಂದು ನುಡಿಯುತ್ತಾರೆ. ಪವನ್ ಡಿಸ್ಟ್ರಿಬ್ಯೂಟರ್ಸ್ ನ್ನು 2 ನೇ ಪ್ರತಿವಾದಿ ನೋಡಿಕೊಳ್ಳುತ್ತಿದ್ದಾರೆ ಎಂದರೆ ಸರಿ. ವಾಯುಪುತ್ರ ಜನರಲ್ ಸ್ಟೋರ್ ನ್ನು 3 ನೇ ಪ್ರತಿವಾದಿ ನೋಡಿಕೊಳ್ಳುತ್ತಿದ್ದಾರೆ ಎಂದರೆ ಸರಿ. 1 ರಿಂದ 3 ನೇ ಪ್ರತಿವಾದಿಗಳು ತಮ್ಮ ಸ್ವಂತ ಹಣದಿಂದ ತಾವೇ ಮಾಡಿಕೊಂಡಿರುವ ಮೇಲೆ ತಿಳಿಸಿದಂತಹ ಟ್ರೇಡರ್ಸ್ ಗಳು ಎಂದರೆ ಸಾಕ್ಷಿಯು ನನ್ನ ತಂದೆಯೇ ಅವುಗಳನ್ನು ಅವರಿಗೆ ಮಾಡಿಕೊಟ್ಟಿದ್ದರು ಎಂದು ನುಡಿಯುತ್ತಾರೆ. ಪ್ರತಿವಾದಿಗಳಿಗೆ ಅವರ ತಂದೆ ಪ್ರಸನ್ನಕುಮಾರ್ ಏನೂ ಮಾಡಿಕೊಟ್ಟಿಲ್ಲ, 1 ರಿಂದ 3 ನೇ ಪ್ರತಿವಾದಿಗಳು ಅವರ ಸ್ವಂತ ದುಡಿಮೆಯಿಂದ ಮಾಡಿಕೊಂಡಿದ್ದಾರೆ ಎಂದರೆ ಸರಿಯಲ್ಲ.

11. ದಾವಾ ಐಟಂ ನಂ.5 ರಿಂದ 10 ನೇ ಸ್ವತ್ತುಗಳನ್ನು 1 ರಿಂದ 3 ನೇ ಪ್ರತಿವಾದಿಗಳು ತಮ್ಮ ಸ್ವಂತ ದುಡಿಮೆಯಿಂದ ಮಾಡಿಕೊಂಡು ಇದ್ದಾರೆ ಎಂದರೆ ಸರಿಯಲ್ಲ. ಉಳಿಕೆ ಆಸ್ತಿಗಳನ್ನು ಸದರಿ ಆಸ್ತಿಗಳ ಆದಾಯದಿಂದ ಮತ್ತು ಬ್ಯುಸಿನೆಸ್ ಹಾಗೂ ಬ್ಯಾಂಕ್ ಲೋನ್ ನಿಂದ ಖರೀದಿ ಮಾಡಿದ್ದಾರೆ ಎಂದರೆ ಸರಿಯಲ್ಲ. ಪ್ರತಿವಾದಿಗಳಿಗಾಗಲೀ ಮತ್ತು ಅವರ ತಂದೆ ಪ್ರಸನ್ನಕುಮಾರ್ ರವರಿಗೆ ನಾನು ಮತ್ತು ನನ್ನ ತಾಯಿ ಸಂಬಂಧಿಕರು ಅಲ್ಲ ಮತ್ತು ಸದರಿ ಸ್ವತ್ತುಗಳ ಮೇಲೆ ಯಾವುದೇ ಹಕ್ಕು ಇಲ್ಲ ಎಂದರೆ ಸರಿಯಲ್ಲ. ಎಂದಿಗೂ ನಾನು ದಾವಾ ಸ್ವತ್ತಿನ ಜಂಟಿ ಸ್ವಾಧೀನದಲ್ಲಿ ಇರಲಿಲ್ಲ ಎಂದರೆ ಸರಿಯಲ್ಲ. ನನಗೆ ಎಲ್ಲಾ ತಿಳಿದಿದ್ದರೂ ಸಹ 2000 ನೇ ಸಾಲಿನ ಮುಂದಕ್ಕೆ ನನ್ನ ತಂದೆಯ ಹೆಸರು ಪ್ರಸನ್ನಕುಮಾರ್ ಎಂದು ಸುಳ್ಳು ಸೃಷ್ಟಿ ಮಾಡಿ, ಸುಳ್ಳು ದಾಖಲಾತಿಗಳನ್ನು ಸೃಷ್ಟಿ ಮಾಡಿ, ಸುಳ್ಳು ಕೇಸು ಹಾಕಿ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. 2000 ನೇ ಸಾಲಿನ ಹಿಂದೆ ಇದ್ದ ದಾಖಲಾತಿಗಳನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿದ್ದಲ್ಲಿ ನಿಜಾಂಶ ಗೊತ್ತಾಗುತ್ತದೆ ಎಂದು ಉದ್ದೇಶಪೂರ್ವಕವಾಗಿ ಸದರಿ ದಾಖಲಾತಿಗಳನ್ನು ಹಾಜರುಪಡಿಸಿಲ್ಲ ಎಂದರೆ ಸರಿಯಲ್ಲ.

ಮರುವಿಚಾರಣೆ ಇಲ್ಲ.

(ಉಕ್ತಲೇಖನವನ್ನು ತೆರೆದ ನ್ಯಾಯಾಲಯದಲ್ಲಿ ಕಂಪ್ಯೂಟರ್ ಗೊಳಿಸಿ ದಾಖಲಿಸಿ ಪ್ರಿಂಟ್ ತೆಗೆಯಲಾಯಿತು) **ಓದಿ ಹೇಳಿ ಕೇಳಿ ಸರಿ ಇದೆ,**

**ಹಿರಿಯ ಸಿ.ಜೆ. ಮತ್ತು ಜೆ.ಎಂ.ಎಫ್.ಸಿ, ಶಿರಾ.**